ಕಥೆ

# ಸಿಲ್ವರ್ ಲೈನಿಂಗ್



**ಆಶಾ ಜಗದೀಶ್**

ಕಲೆ: ವೆಂಕಟ್ರಮಣ ಭಟ್

'ಸುಡುಗಾಡ್ ಮಳಿ, ಇದ್ರ ಮಖ ಸುಡಾ... ಏನಾರಾ ಕಾಡ್ತೈತೇ ಮಾರತಿ... ಒಂದ್ ಬಟ್ಟಿ ಒಣ್ಗಾಂಗಿಲ್ಲ... ಬರಿ ಒಣ್ಗಾಂಗಿಲ್ಲ... ಅಂಡ್ ಎತ್ಕಂಡ್ ಬಂದಾ ಬಿಡ್ತತಿ... ಥುತ್...'

ಪ್ರತಿಮಾ ಆಡಿದ ಮಾತು ಕೇಳಿ ರಾಜಿ ಜೋರಾಗಿ ನಕ್ಕಳು. 'ನೀ ಏನಾರಾ ಅದ್ರ ಅಂಡ್ ತೊಳಿಬೇಕೇನು... ನಡಿಯಾ ಮಾರಾತಿ... ಬತ್ಲ ಮನಿ ಒಳಗ ಹಗ್ಗ ಕಟ್ಟಿ ಬಟ್ಟಿ ಆಹ್ಯಾರ್ಕು... ಮಳಿಗಾಲ ಮುಗಿಯೋವರೆಗೂ ಇದೆ ಕತಿ ಐತಿ, ಹೌದಿಲ್ಲೇನು...' ಎನ್ನುತ್ತಾ ರಾಜಿ ಒಲೆ ಮೇಲೆ ಇಟ್ಟಿದ್ದ ಹಾಲು ನೆನೆಸಿಕೊಂಡು ಅಡುಗೆ ಮನೆಗೆ ಓಡಿದಳು.

ಪ್ರತಿಮಾ ನೆಂದ ಬಟ್ಟೆಗಳನ್ನೆಲ್ಲಾ ಬಕೆಟ್ಟಿನಲ್ಲಿ ತುಂಬಿಕೊಂಡು ಬಚ್ಚಲಿಗೆ ಬಂದಳು. ಸಣ್ಣ ಗಾತ್ರದ ನೈಲಾನ್ ಹಗ್ಗವೊಂದನ್ನು ಮತ್ತಿ ಮೇಲಿಂದ ಆರಿಸಿ ತಂದು ಕಟ್ಟತೊಡಗಿದಳು. ಯಾಕೋ ಗಂಟು ಸರಿಯಾಗಿ ಬೀಳದೆ ಕಾಡಿಸತೊಡಗಿತು. ಪ್ರತಿಮಾ ಕೋಪದಿಂದ ಜೋರಾಗಿ ಜಗ್ಗಿದಳು. ಮೊಳೆ ಕಿತ್ತು ಬಂತು. ಅವಳ ಕೋಪ ಮತ್ತೂ ಹೆಚ್ಚಾಯಿತು. ಒಳ ಹೋಗಿ ಗುಂಡುಕಲ್ಲು ತಂದು ಮೊಳೆಯ ತಲೆ ಮೇಲೆ ಎರೆಡು ಬಾರಿಸಿದಳು. ಹೊಡೆದ ಹೊಡೆತಕ್ಕೆ ಗೋಡೆ ಚಕ್ಕಳವೆದ್ದು ಉದುರಿತು. ಆದರೆ ಮೊಳೆ ಗಟ್ಟಿಯಾಗಿ ಕಚ್ಚಿಕೊಂಡಿತ್ತು. ಸದ್ಯ ಅಂದುಕೊಳ್ಳುತ್ತಾ ಒಂದೊಂದೇ ಬಟ್ಟೆ ತೆಗೆದು ಒಣಗಿಸಹತ್ತಿದಳು. ಯಾಕೋ ಇತ್ತೀಚೆಗೆ ಗಂಡನ ಆರೋಗ್ಯ ಹದಗೆಡುತ್ತಿರುವುದು ಅವಳಲ್ಲಿ ಒಂದು ಬಗೆಯ ಚಿಂತೆ ಮತ್ತು ಅಸಹನೆಗೆ ಕಾರಣವಾಗಿತ್ತು. ಎಂಥ ಗಟ್ಟಿಮುಟ್ಟಾದ ದೇಹ. ಅಂಥವನು ಇತ್ತೀಚೆಗೆ ಯಾವಾಗಲೂ ಸುಸ್ತು ಎಂದು ಮಲಗೇ ಇರುವುದು ನೋಡಿ ಮನಸಿಗೆ ಕಸಿವಿಸಿ. ಆಸ್ಪತ್ರೆಗೆ ಹೋಗೋಣ ಎಂದರೆ ಸುತ್ರಾಂ ಒಪ್ಪುವುದಿಲ್ಲ. 'ಅಯ್ಯ... ಸ್ವಲೂಪ್ ಆರಾಮ್ ಮಾಡಿದ್ರ ಸರಿ ಹೋಕ್ಕತಿ... ಅದಕ್ಯಾಕ್ ಆಸ್ಪತ್ರಿ...' ಎನ್ನುವ ಅವನ ಆರಾಮು ಮುಗಿಯುತ್ತಲೇ ಇಲ್ಲ. ಯಾಕೋ ಸೊರಗುತ್ತಿದ್ದಾನೆ ಅಂತಲೂ ಅನಿಸುತ್ತಿತ್ತು ಅವಳಿಗೆ.

'ಅಕ್ಕಾ ಚಾಕಿಡೇ... ಚಳಿ ಆಗ್ಲಿಕತ್ತೈತಿ... ರಾತ್ರಿ ಹಿಡುದ್ ಮಳಿ... ಇನ್ನಾರೂ ಬಿಡಾವಲ್ದು...' ಎಂದು ಬಚ್ಚಲಿನಿಂದಲೇ ರಾಜಿಗೆ ಕೂಗು ಹಾಕಿದಳು. 'ಹಾ ಇಡ್ತನಿ... ಬಾ ನೀನು... ಕೈಕಾಲು ತೊಳುದು...' ಎಂದು ಕೂಗು ಹಾಕಿದಳು ರಾಜಿ ಅಡುಗೆ ಮನೆಯಿಂದಲೇ. ಹಂಡೆಗೆ ಕೈ ಹಾಕಿದವಳಿಗೆ ಬಿಸಿ ನೀರು ತಗುಲಿ ಹಿತವೆನಿಸಿತು. ಬಿಸಿ ಬಿಸಿ ನೀರಿಂದ ಕೈ ಕಾಲು ಮುಖ ತೊಳೆದುಕೊಂಡಳು. ಒಲೆ ಇನ್ನೂ ಆರಿರಲಿಲ್ಲ. ಕೆಂಡ ಕೆಂಪಗೆ ಮಿನುಗುತ್ತಿತ್ತು. ಒಂದೆರೆಡು ಕೋಲು ತುರುಕಿದಳು. ಇನ್ನಷ್ಟು ಉರಿಯಲು ಒಲೆ ಅಣಿಗೊಂಡಿತು. ಅರ್ಧವಾಗಿದ್ದ ಹಂಡೆಗೆ ಇನ್ನಷ್ಟು ತಣ್ಣೀರು ಹೊಯ್ದು ತುಂಬಿಸಿದಳು. ಎರಡು ನಿಮಿಷ ಒಲೆಯ ಮುಂದೆ ಬೆಂಕಿ ಕಾಯಿಸಿಕೊಂಡು, ಮೈ ಕೈ ಬೆಚ್ಚಗಾದ ನಂತರ, ಸೊಂಟಕ್ಕೆ ಸಿಕ್ಕಿಸಿಕೊಂಡಿದ್ದ ಸೀರೆಯ ನೆರಿಗೆಗಳನ್ನು ಬಿಚ್ಚಿ ಕೊಡವಿಕೊಳ್ಳುತ್ತಾ ಅಡುಗೆ ಮನೆಗೆ ಬಂದಳು. ಚಹಾ ಹಬೆ ಘಮ್ಮೆಂದು ಮೂಗಿಗೆ ಬಡಿಯಿತು. ಅಕ್ಕ ತಂಗಿಯರಂತಿದ್ದ ಈ